# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 263**
**ಸದಸ್ಯರ ಹೆಸರು : ಶ್ರೀ ಗೋವಿಂದರಾಜು**
**(ವಿಧಾನ ಸಭೆಯಿಂದ ಚುನಾಯಿತರಾದವರು)**
**ಉತ್ತರಿಸಬೇಕಾದ ದಿನಾಂಕ : 06.03.2025.**
**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಸಂಖ್ಯೆಯೆಷ್ಟು ಹಾಗೂ ಕಳೆದ 03 ವರ್ಷದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; (ಚಿತ್ರಮಂದಿರಗಳವಾರು ಮಾಹಿತಿ ಒದಗಿಸುವುದು) | ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಸಂಖ್ಯೆ:41. ಸದರಿ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಿಂದ ಸರ್ಕಾರಕ್ಕೆ ಪಾವತಿಸಿರುವ ಪರವಾನಗಿ ನವೀಕರಣ ಶುಲ್ಕದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಈ ಚಿತ್ರಮಂದಿರಗಳಿಗೆ ಟಿಕೆಟ್ ದರಗಳನ್ನು ನಿಗಧಿಮಾಡುವ ಅಧಿಕಾರ ಯಾರಿಗೆ ಇದೆ; ಪ್ರತಿ ಚಿತ್ರಮಂದಿರದಲ್ಲಿ ಒಂದೊಂದು ಟಿಕೆಟ್ ದರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚಿತ್ರಮಂದಿರಗಳಿಗೆ ಟಿಕೆಟ್ ದರಗಳನ್ನು ಚಿತ್ರಮಂದಿರಗಳ ಮಾಲಿಕರೇ ನಿರ್ಧಾರ ಮಾಡುವ ಪದ್ಧತಿ ಜಾರಿಯಲ್ಲಿದೆ. ಅವಶ್ಯವೆನಿಸಿದ್ದಲ್ಲಿ ದರ ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕಿದೆ.<br><br>ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಇ) | ಹಾಗಿದ್ದರೆ ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; | ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಈ) | ಕರ್ನಾಟಕದಲ್ಲಿ ಅನ್ಯ ಭಾಷಾ ಸಿನಿಮಾಗಳು ಬಿಡುಗಡೆಯಾದರೆ 500 ರೂಗಳಿಂದ 1500 ರೂಪಾಯಿಗಳಿಗೆ ಹೆಚ್ಚು ಮಾಡಲಾಗುತ್ತಿದ್ದು, ಇದರಿಂದ ಯಾರಿಗೆ ಅನುಕೂಲವಾಗುತ್ತದೆ; | ಅನ್ಯ ಭಾಷಾ ಸಿನಿಮಾಗಳಿಗೆ ಮಾತ್ರ ಟಿಕೆಟ್ ದರ ಹೆಚ್ಚು ಮಾಡುತ್ತಿರುವ ಬಗ್ಗೆ ಯಾವುದೇ ದೂರುಗಳು ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |

…2…..

| | | |
|---|---|---|
| ಉ) | ಕನ್ನಡ ಚಿತ್ರಗಳಿಗೂ ಸಹ 500 ರೂ ನಿಂದ 1000 ರೂ ಗಳವರೆಗೂ ಟಿಕೆಟ್ ದರ ನಿಗಧಿಪಡಿಸಿದರೆ, ಕನ್ನಡ ಚಿತ್ರಗಳನ್ನು ಪ್ರೋತ್ಸಾಹ ನೀಡುವವರು ಯಾರು; ಕನ್ನಡ ಚಿತ್ರಗಳಿಗೆ ಮಲ್ಟಿಪ್ಲೆಕ್ಸ್ ಚಿತ್ರಮಂದಿರದಲ್ಲಿ ಕನಿಷ್ಠ 100 ರೂ ನಿಂದ 150 ರೂವರೆಗೂ ನಿಗಧಿಪಡಿಸಲು ಸರ್ಕಾರದಿಂದ ಆದೇಶ ಹೊರಡಿಸಲು ಇರುವ ತೊಂದರೆ ಏನು; | ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಊ) | ರಾಜ್ಯಕ್ಕೆ ಪರಭಾಷಾ ಚಿತ್ರಗಳು ಬಿಡುಗಡೆಯಾದರೆ ಬೆಂಗಳೂರಿನಲ್ಲಿರುವ ಎಲ್ಲಾ ಮಲ್ಟಿಪ್ಲೆಕ್ಸ್ ಚಿತ್ರಮಂದರಿಗಳಲ್ಲಿ ಪ್ರದರ್ಶನಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದ್ದು, ಇದರಿಂದ ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ; ಇದಕ್ಕೆ ಪರಿಹಾರ ಏನು? | ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು ಬಹು ಪರದೆಗಳನ್ನು ಹೊಂದಿರುವುದರಿಂದ, ಅನ್ಯ ಭಾಷಾ ಚಿತ್ರಗಳು ಪ್ರದರ್ಶನಗೊಳ್ಳುತ್ತಿದ್ದರೂ ಸಹ, ಉಳಿದ ಪರದೆಗಳಲ್ಲಿ ಕನ್ನಡ ಭಾಷಾ ಚಿತ್ರಗಳಿಗೆ ಅವಕಾಶ ಇರುವ ಕಾರಣ, ಕನ್ನಡ ಚಿತ್ರಗಳಿಗೆ ಚಿತ್ರಮಂದಿರದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಸಂಖ್ಯೆ: ಹೆಚ್‌ಡಿ 06 ಸಿಎನ್‌ಎ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

## ಅನುಬಂಧ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 34 (263) ಪ್ರಶ್ನೆಗೆ ಸಂಬಂಧಿಸಿದಂತೆ ಉತ್ತರ

| ಕ್ರಸಂ. | ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಹೆಸರು | ಕಳೆದ 3 ವರ್ಷಗಳಿಂದ ಸರ್ಕಾರಕ್ಕೆ ಪಾವತಿಸಿರುವ ಪರವಾನಗಿ ನವೀಕರಣ ಶುಲ್ಕ |
|---|---|---|
| 1 | 2 | 3 |
| 1 | ಇನೋವೆಟಿವ್ ಮಲ್ಟಿಪ್ಲೆಕ್ಸ್, ಮಾರತ್ತಹಳ್ಳಿ | 2,20,600 |
| 2 | ಮೀರಜ್ ಸಿನಿಮಾಸ್, ಹೆಗ್ಗನಹಳ್ಳಿ | 2,45,300 |
| 3 | ರಾಕ್‌ಲೈನ್ ಸಿನಿಮಾಸ್, ಜಾಲಹಳ್ಳಿ | 85,500 |
| 4 | ಮೂವಿ ಟೈಮ್ಸ್, ಹಲಗೇವಡೇರಹಳ್ಳಿ | 1,30,500 |
| 5 | ಗೋಪಾಲನ್ ಸಿನಿಮಾಸ್, ಮೈಸೂರು ರಸ್ತೆ | 2,90,250 |
| 6 | ಗೋಪಾಲನ್ ಸಿನಿಮಾಸ್, ರಾಜರಾಜೇಶ್ವರಿನಗರ | 1,95,750 |
| 7 | ಗೋಪಾಲನ್ ಸಿನಿಮಾಸ್, ಬನ್ನೇರುಘಟ್ಟ ರಸ್ತೆ | 1,95,750 |
| 8 | ಗೋಪಾಲನ್ ಸಿನಿಮಾಸ್, ಹಳೇ ಮದ್ರಾಸ್ ರಸ್ತೆ | 2,09,250 |
| 9 | ಗೋಪಾಲನ್ ಸಿನಿಮಾಸ್, ನಾಗವಾರ ಪಾಳ್ಯ | 1,14,900 |
| 10 | ಸಿನಿಪೊಲೀಸ್, ಗೋಪಾಲಪುರ | 3,24,000 |
| 11 | ಸಿನಿಪೊಲೀಸ್, ಶಿರಸಿ ವೃತ್ತ | 2,39,375 |
| 12 | ಸಿನಿಪೊಲೀಸ್, ಬಾಣಸವಾಡಿ | 1,05,660 |
| 13 | ಸಿನಿಪೊಲೀಸ್, ಹುಳಿಮಾವು | 2,02,320 |
| 14 | ಸಿನಿಪೊಲೀಸ್, ಬನ್ನೇರುಘಟ್ಟ ರಸ್ತೆ | 83,250 |
| 15 | ಸಿನಿಪೊಲೀಸ್, ಹೂಡಿ | 2,68,110 |
| 16 | ಐನೋಕ್ಸ್ ಪಿವಿಆರ್, ಸಂಪಿಗೆ ರಸ್ತೆ, ಮಲ್ಲೇಶ್ವರಂ | 1,89,000 |
| 17 | ಐನೋಕ್ಸ್ ಪಿವಿಆರ್, ಬ್ಯಾಟರಾಯನಪುರ | 3,33,000 |
| 18 | ಐನೋಕ್ಸ್ ಪಿವಿಆರ್, ಮೆಗ್ರತ್ ರಸ್ತೆ | 76,500 |
| 19 | ಐನೋಕ್ಸ್ ಪಿವಿಆರ್, ಸ್ವಾಗತ್ ರಸ್ತೆ, ತಿಲಕನಗರ | 90,000 |
| 20 | ಐನೋಕ್ಸ್ ಪಿವಿಆರ್, ಶಿಗೇಹಳ್ಳಿ | 1,23,000 |
| 21 | ಐನೋಕ್ಸ್ ಪಿವಿಆರ್, ಎಂ.ಜಿ.ರಸ್ತೆ | 65,250 |
| 22 | ಐನೋಕ್ಸ್ ಪಿವಿಆರ್, ವೈಟ್‌ಫೀಲ್ಡ್ ರಸ್ತೆ | 1,21,400 |
| 23 | ಐನೋಕ್ಸ್ ಪಿವಿಆರ್, ಮಾರೇನಹಳ್ಳಿ | 74,250 |
| 24 | ಐನೋಕ್ಸ್ ಪಿವಿಆರ್, ಬ್ರೂಕ್ ಫೀಲ್ಡ್ | 40,500 |

| | | |
|---|---|---|
| 25 | ಐನೋಕ್ಸ್ ಪಿವಿಆರ್, ಯಲಹಂಕ | 1,84,500 |
| 26 | ಐನೋಕ್ಸ್ ಪಿವಿಆರ್, ಯಲಹಂಕ ನ್ಯೂ ಟೌನ್ | 90,000 |
| 27 | ಐನೋಕ್ಸ್ ಪಿವಿಆರ್, ಚೊಕ್ಕನಹಳ್ಳಿ | 2,16,000 |
| 28 | ಐನೋಕ್ಸ್ ಪಿವಿಆರ್, ಬಿದರಹಳ್ಳಿ | 1,26,000 |
| 29 | ಐನೋಕ್ಸ್ ಪಿವಿಆರ್, ಬ್ರಿಗೇಡ್ ರಸ್ತೆ | 90,000 |
| 30 | ಐನೋಕ್ಸ್ ಪಿವಿಆರ್, ದೇವಸಂದ್ರ | 2,70,000 |
| 31 | ಐನೋಕ್ಸ್ ಪಿವಿಆರ್, ವೈಟ್‌ಫೀಲ್ಡ್ | 1,15,000 |
| 32 | ಐನೋಕ್ಸ್ ಪಿವಿಆರ್, ಕೋರಮಂಗಲ | 3,40,000 |
| 33 | ಐನೋಕ್ಸ್ ಪಿವಿಆರ್, ಬೆಳ್ಳಂದೂರು | 1,20,000 |
| 34 | ಐನೋಕ್ಸ್ ಪಿವಿಆರ್, ದೇವಸಂದ್ರ | 2,91,300 |
| 35 | ಐನೋಕ್ಸ್ ಪಿವಿಆರ್, ಬನ್ನೇರುಘಟ್ಟ ರಸ್ತೆ | 3,29,100 |
| 36 | ಐನೋಕ್ಸ್ ಪಿವಿಆರ್, ಮೈಸೂರು ರಸ್ತೆ | 94,500 |
| 37 | ಐನೋಕ್ಸ್ ಪಿವಿಆರ್, ಥಣಿಸಂದ್ರ | 1,76,000 |
| 38 | ಐನೋಕ್ಸ್ ಪಿವಿಆರ್, ರಾಜಾಜಿನಗರ | 2,00,400 |
| 39 | ಐನೋಕ್ಸ್ ಪಿವಿಆರ್, ಯಶವಂತಪುರ | 2,00,000 |
| 40 | ಐನೋಕ್ಸ್ ಪಿವಿಆರ್, ಕನಕಪುರ ರಸ್ತೆ | 4,05,000 |
| 41 | ಐನೋಕ್ಸ್ ಪಿವಿಆರ್, ಮಾಗಡಿ ರಸ್ತೆ | 1,71,000 |
| | ಒಟ್ಟು | **74,42,215** |

# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 285
**ಮಾನ್ಯ ಸದಸ್ಯರ ಹೆಸರು** : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : 06.03.2025
**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕೇಂದ್ರ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ; | ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕಾಮಗಾರಿಯನ್ನು 2013-14ನೇ ಸಾಲಿನಲ್ಲಿ ರೂ.268.04 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪ್ರಾರಂಭಿಸಲಾಗಿತ್ತು. ತದನಂತರ, ಸದರಿ ಕಾಮಗಾರಿಯನ್ನು ಸರ್ಕಾರದ ಆದೇಶ ಸಂಖ್ಯೆ:ಟಿಓಆರ್ 84 ಟಿಡಿಪಿ 2020 ದಿನಾಂಕ:27-05-2020 ರ ಆದೇಶದನ್ವಯ ರೂ.330.45 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. |
| ಆ) | ಈ ಹೆರಿಟೇಜ್ ಕೇಂದ್ರದ ಕಾಮಗಾರಿಗೆ ಒಟ್ಟು ಮೀಸಲಿರಿಸಿದ ಅನುದಾನ ಎಷ್ಟು? | ಈ ಹೆರಿಟೇಜ್ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ:ಟಿಓಆರ್/84/ಟಿಡಿಪಿ/2020, ದಿನಾಂಕ:27-05-2020 ರನ್ವಯ ಮೀಸಲಿಟ್ಟ ಒಟ್ಟಾರೆ ರೂ.330.45 ಲಕ್ಷಗಳ ಅನುದಾನವನ್ನು ಆರು ಕಂತುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. |
| ಇ) | ಸದರಿ ಕಾಮಗಾರಿ ಯಾವ ಹಂತದಲ್ಲಿದೆ; ಕಾಮಗಾರಿ ವಿಳಂಬವಾಗಲು ಕಾರಣವೇನು; | ಸರ್ಕಾರದ ಪರಿಷ್ಕೃತ ಆದೇಶ ಸಂಖ್ಯೆ: ಟಿಓಆರ್/84/ಟಿಡಿಪಿ/2020, ದಿನಾಂಕ:27-05-2020 ರನ್ವಯ ರೂ.330.45 ಲಕ್ಷಗಳ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಯನ್ವಯ ಅಂದಾಜು ಪಟ್ಟಿಯಲ್ಲಿರುವಂತೆ, 02 ಸಂಖ್ಯೆಯ ಐನ್ ಮನೆಗಳ ನಿರ್ಮಾಣ (ಅಡಿಗೆಮನೆ, ದೊಡ್ಡ ಹಾಲ್, ಲೈಬ್ರರಿ) ಬಯಲು ರಂಗಮಂದಿರ, ವಾಟರ್ ಟ್ಯಾಂಕ್ ಅಪ್ಪರ್ ಮತ್ತು ಲೋವರ್ ಡಿಸ್ಪ್ಲೇ ಭಾಗದ ತಡೆಗೋಡೆ ನಿರ್ಮಾಣ ಇತರೆ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಮೆಟ್ಟಿಲು ನಿರ್ಮಾಣ ಹಾಗೂ ಇತ್ಯಾದಿ ಸೌಲಭ್ಯಗಳನ್ನು ಪೂರ್ಣಗೊಳಿಸಲಾಗಿರುತ್ತದೆ. |
| ಈ) | ಕೊಡವ ಹೆರಿಟೇಜ್ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಳಿಸಲು ಅವಶ್ಯವಿರುವ 495.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆ ಸಹಮತಿ | ಕೊಡವ ಹೆರಿಟೇಜ್ ಸೆಂಟರ್ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲು ಆಗಬೇಕಾಗಿರುವ ಪೂರಕ ಕಾಮಗಾರಿಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನ ರೂ.495.00 ಲಕ್ಷಗಳನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡದೇ ಇರುವುದರಿಂದ ಸದರಿ ಕಾಮಗಾರಿಗಳನ್ನು |

| | | |
|---|---|---|
| | ನೀಡದೇ ಇರಲು ಕಾರಣವೇನು; | ಸಿಎಸ್‌ಆರ್ ಅನುದಾನದಡಿಯಲ್ಲಿ ಕೈಗೊಳ್ಳುವಂತೆ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ/ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.<br><br>ಪ್ರಸ್ತುತ, ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಕೊಡಗು ಜಿಲ್ಲೆ, ಮಡಿಕೇರಿ ಇವರು ಸದರಿ ಕಾಮಗಾರಿಯನ್ನು ಸಿಎಸ್‌ಆರ್ ಅನುದಾನದಲ್ಲಿ ಕೈಗೊಂಡು ನಿರ್ವಹಣೆ ಮತ್ತು ಕಾರ್ಯಾಚರಣೆ ಮಾಡಲು ಕಷ್ಟಸಾಧ್ಯ/ ಕಾರ್ಯಸಾಧುವಲ್ಲದ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು ಪಿಪಿಪಿ (Public Private Partnership) ಮಾದರಿಯಲ್ಲಿ ಪೂರ್ಣಗೊಳಿಸಿ ನಿರ್ವಹಣೆ ಹಾಗೂ ಕಾರ್ಯಚರಣೆ ಮಾಡುವ ಬಗ್ಗೆ ಮಾರ್ಗದರ್ಶನ ನೀಡಲು ಕೋರಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಮುಂದಿನ ಕ್ರಮವಹಿಸಲಾಗುವುದು. |
| ಉ) | ಹೆಚ್ಚುವರಿ ಅನುದಾನವನ್ನು ಶೀಘ್ರ ಬಿಡುಗಡೆಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ವಿವರ ನೀಡುವುದು) | |

**ಸಂಖ್ಯೆ:ಟಿಓಆರ್ 27 ಟಿಡಿವಿ 2025**

(ಎಚ್.ಕೆ.ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 266 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಹಾಗೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಹಲವು ಕಿಡಿಗೇಡಿಗಳು ಮತ್ತು ದರೋಡೆಕೋರರಿಂದ ಕಾನೂನು ಸುವ್ಯವಸ್ಥೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಜ್ಯಾದ್ಯಂತ ಕಾನೂನು ಸುವ್ಯವಸ್ಥೆ ಹಾಳು ಮಾಡುವಂತಹ ಘಟನೆಗಳು ನಡೆಯದಂತೆ ಮುಂಗಡ ಮಾಹಿತಿಯನ್ನು ಕಲೆಹಾಕಿ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ನಿಗಾವಹಿಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ವೀಲ್ಹಿಂಗ್ ಹಾಗೂ ಎಷ್ಟೋ ಕಿಡಿಗೇಡಿಗಳು, ದರೋಡೆಕೋರರ ಕೈನಲ್ಲಿ ಚಾಕು, ಚೂರಿ, ಲಾಂಗ್‌ಗಳನ್ನು ಹಿಡಿದುಕೊಂಡು ಓಡಾಡುತ್ತಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಕರ್ತವ್ಯ ಲೋಪವನ್ನು ಗಮನಿಸಲಾಗಿದೆಯೇ; | ವೀಲ್ಹಿಂಗ್ ಮಾಡುವಂತಹ ಮತ್ತು ಕೈಯಲ್ಲಿ ಚಾಕು, ಚೂರಿ, ಲಾಂಗ್‌ಗಳನ್ನು ಹಿಡಿದುಕೊಂಡು ಓಡಾಡುತ್ತಾ ಸಮಾಜದಲ್ಲಿ ಶಾಂತಿ ಕದಡುತ್ತಿರುವುದು ಕಂಡು ಬಂದ ಕೂಡಲೇ ಅಂತಹವರನ್ನು ದಸ್ತಗಿರಿ ಮಾಡಿ ಬಂಧಿಸಿ, ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ರೀತಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಿದೆ? | ಸಮಾಜದ ಶಾಂತಿ ಹಾಳು ಮಾಡುವ ಉದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ, ಗಲಭೆ ಸೃಷ್ಟಿಸುವವರ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣಗಳನ್ನು ದಾಖಲಿಸಿಕೊಂಡು ಸಾರ್ವಜನಿಕರ ನೆಮ್ಮದಿಯನ್ನು ಕಾಪಾಡಲಾಗುತ್ತಿದೆ.<br>➢ ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಬೀಟ್ ವ್ಯವಸ್ಥೆ ಮಾಡಲಾಗಿದೆ ಹಾಗೂ ಸದರಿ ಬೀಟ್‌ಗಳಿಗೆ ಉಸ್ತುವಾರಿ ಅಧಿಕಾರಿಗಳನ್ನು ನೇಮಕ ಮಾಡಿ, ಯಾವುದೇ ಅಪರಾಧ ಕೃತ್ಯಗಳು ಜರುಗದಂತೆ ನಿಗಾವಹಿಸಲಾಗುತ್ತಿದೆ. ಒಂದು ವೇಳೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯ ನಿರ್ಲಕ್ಷತೆಯಿಂದಾಗಿ ಅಪರಾಧ ಕೃತ್ಯಗಳು ಜರುಗಲು ಕಾರಣವಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲಾಗುತ್ತಿದೆ.<br>➢ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 267 ಎಸ್‌ಎಸ್‌ಟಿ 2018 ದಿನಾಂಕ: 28.09.2018 ರಲ್ಲಿ ನೀಡಿರುವ ಪ್ರದತ್ತವಾದ ಅಧಿಕಾರದನ್ವಯ ಮತ್ತು ಪದೇ ಪದೇ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ರೌಡಿ ಆಸಾಮಿಗಳ ಬಗ್ಗೆ ನಿಗಾವಹಿಸಿ ಅವರುಗಳ ವಿರುದ್ಧ ಸುಮೋಟೊ ಪ್ರಕರಣಗಳನ್ನು ದಾಖಲಿಸಿ ಗಡಿಪಾರು ಮಾಡುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಸದರಿ ಅಸಾಮಿಗಳ ವಿರುದ್ಧ The |

| | | |
|---|---|---|
| | | Karnataka Control of Organised Crime Act-2000 ಮತ್ತು The Karnataka Prevention of Dangerous Activities of Bootleggers, Drug-Offenders, Gamblers, Goondas, Immoral Traffic Offenders, Slum-Grabbers and video or Audio Pirates Act-1985 ರಡಿಯಲ್ಲಿ ಕ್ರಮ ಕೈಗೊಳ್ಳಕಾಗುತ್ತಿದೆ.<br>➢ ಸುಸಜ್ಜಿತವಾದ ಗಸ್ತು ಕರ್ತವ್ಯವನ್ನು ನಿರ್ವಹಿಸಲು ನಗರದಲ್ಲಿ ಹೊಯ್ಸಳ ವಾಹನವನ್ನು ಮತ್ತು ಚೀತಾ ವಾಹನಗಳನ್ನು ನಿಯೋಜಿಸಲಾಗಿದೆ. ಈ ಮೂಲಕ ನಗರದ ಯಾವುದೇ ಸ್ಥಳದಿಂದ 112 ಸಂಖ್ಯೆಗೆ ಕರೆಮಾಡಿ ಕೆಲವೇ ನಿಮಿಷಗಳ ಒಳಗಾಗಿ ಆ ಸ್ಥಳವನ್ನು ತಲುಪಿ ನೊಂದ ವ್ಯಕ್ತಿಗೆ ನ್ಯಾಯ ಕೊಡಿಸುವ ಹಾಗೂ ಅಪರಾಧ ಕೃತ್ಯವನ್ನು ತಡೆಯುವ ಯೋಜನೆಯನ್ನು ರೂಪಿಸಲಾಗಿದೆ.<br>➢ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರಪತ್ರಗಳನ್ನು ಹಂಚಿಕೆ ಮಾಡಿ ಅವರಿಗೆ ಅಪರಾಧ ಕೃತ್ಯಗಳ ಅರಿವು ಮೂಡಿಸಿ ಹಾಗೂ ಅಲ್ಲಿನ ಭಾತ್ಮೀದಾರರ ಮೂಲಕ ಅಪರಾಧ ಕೃತ್ಯಗಳ ಬಗ್ಗೆ ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಕ್ರಮ ವಹಿಸಲಾಗುತ್ತಿದೆ.<br>➢ ಪೊಲೀಸ್ ಠಾಣಾ ಸರಹದ್ದುಗಳಲ್ಲಿ ನಾಗರೀಕ ಸಮಿತಿ ಸದಸ್ಯರ, ಶಾಂತಿ ಪಾಲನಾ ಸಮಿತಿ ಸದಸ್ಯರ ಹಾಗೂ ಹಿರಿಯ ನಾಗರೀಕರ ಜನಸ್ನೇಹಿ ಸಭೆಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ಆ ಸಭೆಗಳಲ್ಲಿ ಸಾರ್ವಜನಿಕರಿಂದ ಪೊಲೀಸರಿಗೆ ಯಾವ ರೀತಿ ಮಾಹಿತಿಯನ್ನು ಒದಗಿಸಬಹುದು ಎಂಬ ಬಗ್ಗೆ ಹಾಗೂ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಗೆ ಪೊಲೀಸರು ಯಾವ ರೀತಿಯ ರಕ್ಷಣೆಯನ್ನು ನೀಡಲಾಗುವುದು ಎಂಬ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗುತ್ತಿದೆ. ಇದರಿಂದಾಗಿ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಗೆ ರಕ್ಷಣೆಯನ್ನು ನೀಡಲು ನೆರವಾಗುತ್ತಿದೆ.<br>➢ ಮಹಿಳೆಯರಿಗೆ ಠಾಣೆಯ ಮತ್ತು ಅಧಿಕಾರಿಗಳ ದೂರವಾಣಿ ಸಂಖ್ಯೆಗಳನ್ನು ನೀಡಿ, ಯಾರಾದರೂ ಅನುಮಾನಾಸ್ಪದ/ ಅಪರಿಚಿತ ವ್ಯಕ್ತಿಗಳು ತಮ್ಮ ಮನೆಯ ಬಳ ಕಂಡು ಬಂದಲ್ಲಿ ಠಾಣೆಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡುವಂತೆ ತಿಳುವಳಿಕೆ ನೀಡಲಾಗಿರುತ್ತದೆ.<br>➢ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರನ್ನೊಳಗೊಂಡ ವಾಟ್ಸಪ್ ಗ್ರೂಪ್ ಅನ್ನು ತೆರೆದು ಮಾನಿಟರ್ ಮಾಡಲಾಗುತ್ತಿದೆ.<br>➢ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್ ರಚಿಸಿ ಮಾನಿಟರಿಂಗ್ ಮಾಡಲಾಗುತ್ತಿದೆ.<br>➢ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗುವ ಅಪರಾಧಿಗಳ ಮಾಹಿತಿಯನ್ನು ಪಡೆದು ಅವರ ಚಲನ-ವಲನದ ಮೇಲೆ ನಿಗಾ ಇಡಲಾಗುತ್ತಿದೆ.<br>➢ MCCTNS App ಮೂಲಕ ಫಿಂಗರ್ ಪ್ರಿಂಟ್ ಸ್ಕ್ಯಾನ್ ಮಾಡಿ, ಈ ಹಿಂದೆ ಪ್ರಕರಣ ದಾಖಲಾಗಿದ್ದಲ್ಲಿ ವಿಚಾರಣೆ ಮಾಡಲಾಗುತ್ತಿದೆ. |

ಸಂಖ್ಯೆ: 93 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು